ಅಪೂರ್ವ ಹೆಣ್ಣು,
ಅದು ನಾನು.

ನನ್ನಲ್ಲಿ ಅಂಥದ್ದೇನಿದೆಯೆಂದು
ಪುರುಷರೇ ವಿಸ್ಮಯಗೊಂಡಿದ್ದಾರೆ.
ಅವರು ಎಷ್ಟೇ ಪ್ರಯತ್ನಿಸಿದರೂ
ನನ್ನೊಳಗಿನ ಗೂಢವನ್ನು ಮುಟ್ಟಲಾರರು.
ನಾನು ತೋರಲು ಪ್ರಯತ್ನಪಟ್ಟರೂ
ಕಂಡುಕೊಳ್ಳಲಾಗದ ಕುರುಡರವರು.
ಹೇಳುತ್ತೇನೆ... ಕೇಳಿ,
ಅದಿರುವುದು ನನ್ನ ಬೆನ್ನುಹುರಿಯ ಬಿಲ್ಲಿನಲ್ಲಿ,
ನನ್ನ ಮುಗುಳ್ನಗೆಯ ಸೂರ್ಯರಶ್ಮಿಯಲ್ಲಿ,
ನನ್ನೆದೆಯ ಏರಿಳಿತದ ಸವಾರಿಯಲ್ಲಿ,
ನನ್ನ ಶೈಲಿಯ ಘನತೆಯಲ್ಲಿ.
ನಾನೋರ್ವ ಅದ್ಭುತ ಹೆಣ್ಣು.
ಅಪೂರ್ವ ಹೆಣ್ಣು,
ಅದು ನಾನು.

ಈಗ ನಿಮಗರಿವಾಗಿರಬಹುದು
ನಾನೇಕೆ ಮರ್ಯಾದಾಪೂರ್ವಕವಾಗಿ ತಲೆಬಾಗಿಲ್ಲವೆಂದು.
ನಾನು ಕಿರುಚುವುದಿಲ್ಲ ಅಥವಾ ಹಾರಾಡುವುದಿಲ್ಲ
ಅಥವಾ ಆರ್ಭಟದಿಂದ ಕೂಗಾಡುವ ಅವಶ್ಯಕತೆಯೂ ನನಗಿಲ್ಲ.
ಹಾದು ಹೋಗುವಾಗ ನೋಡಿದ ಪಕ್ಷದಲಿ
ನನ್ನ ಬಗ್ಗೆ ಹೆಮ್ಮೆ ಪಡಲೇಬೇಕು ನೀವು.
ನಾ ತಿಳಿಸುತ್ತೇನೆ,
ಆ ರಹಸ್ಯವಿರುವುದು ನನ್ನ ನಡಿಗೆಯ ಸಪ್ಪಳದಲ್ಲಿ,
ನನ್ನ ತಲೆಗೂದಲ ಡೊಂಕಿನಲ್ಲಿ,
ನನ್ನ ಅಂಗೈಯ ಸೊಗಸಿನಲ್ಲಿ,
ನನ್ನ ಪೋಷಣೆಯ ಆಗತ್ಯದಲ್ಲಿ,
ಯಾಕೆಂದರೆ ನಾನೋರ್ವ ಅದ್ಭುತ ಹೆಣ್ಣು
ಅಪೂರ್ವ ಹೆಣ್ಣು,
ಅದು ನಾನು.

**● ಮೂಲ : ಮಾಯಾ ಏಂಜೆಲೊ**
**ಕನ್ನಡಕ್ಕೆ : ಸುಮತಿ ಮುದ್ದೇನಹಳ್ಳಿ**

## ಮಾಯಾ ಏಂಜೆಲೊ

(1928–2014)

ಕವಯಿತ್ರಿ ಮತ್ತು ಅಮೆರಿಕದ ಪೌರ ಹಕ್ಕುಗಳ ಹೋರಾಟಗಾರ್ತಿ. ನಟಿ, ಹಾಡುಗಾರ್ತಿ, ನಿರ್ಮಾಪಕಿ ಮತ್ತು ನೃತ್ಯಗಾರ್ತಿ ಕೂಡ. ಜೀವನ ಚರಿತ್ರೆಗಳು, ಪ್ರಬಂಧಗಳು ಮತ್ತು ನಾಟಕ ಪ್ರಕಾರಗಳಲ್ಲಿ ಬರೆದಿದ್ದಾರೆ. ಅವರ 'ಐ ನೊ ವೈ ದ ಕೇಜ್ಡ್ ಬರ್ಡ್ ಸಿಂಗ್ಸ್' ಅವರ ಅತ್ಯಂತ ಜನಪ್ರಿಯ ಕವನ ಸಂಕಲನ.

ಮಾಯಾ ಏಂಜೆಲೊ, ಈ ಕವನವನ್ನು ರಚಿಸಿರುವುದು ಪ್ರಪಂಚದೆಲ್ಲೆಡೆಯಲ್ಲಿ ನೆಲೆಸಿರುವ ಸ್ತ್ರೀ ಸಮುದಾಯಕ್ಕಾಗಿ ಎನ್ನುತ್ತಾರೆ: 'ನಾನು ಈ ಕವನವನ್ನು ರಚಿಸಿದ್ದು ಕಪ್ಪು ಮಹಿಳೆಯರಿಗಾಗಿ, ಬಿಳಿಯ ಸ್ತ್ರೀಯರಿಗಾಗಿ, ಚೀನಿ ಹೆಂಗಳೆಯರಿಗಾಗಿ, ಜಪಾನಿ ಹೆಣ್ಣುಮಕ್ಕಳಿಗಾಗಿ, ಮತ್ತು ಯೆಹೂದಿ ಹೆಣ್ಣುಗಳಿಗಾಗಿ. ನಾನಿದನ್ನು ಬರೆದಿದ್ದು ರೆಡ್ ಇಂಡಿಯನ್ ಮೂಲದ ಹೆಣ್ಣುಗಳಿಗಾಗಿ, ಅಲುಟ್ ದ್ವೀಪ ಮತ್ತು ಎಸ್ಕಿಮೋ ಪ್ರದೇಶಗಳ ಸ್ತ್ರೀಯರಿಗಾಗಿ. ನಾನಿದನ್ನು ಇಡೀ ಹೆಣ್ಣು ಕುಲಕ್ಕಾಗಿ ಬರೆದಿದ್ದೇನೆ. ದಢೂತಿ ಹೆಣ್ಣುಮಕ್ಕಳಿಗಾಗಿ, ಪೀಚಲು, ಸುಂದರ, ಮತ್ತು ಸಾಧಾರಣ ರೂಪಿನ ಹೆಂಗಳೆಯರೆಲ್ಲರಿಗೂ ಈ ಕವನ ಸಲ್ಲುತ್ತದೆ.'